**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ.ಸಿ. ನಂ. 25/2025**

**ಚಾ.ಸಾಃ 1, ಫ್ರಾ.ಸಾಃ 1**

| | |
|---|---|
| ಸಾಕ್ಷಿದಾರನ ಹೆಸರು | ಅಫ್ರಿನಾಜ್ |
| ಗಂಡನ ಹೆಸರು | ಹಕೀಮ್ ಖಾನ್ |
| ವಯಸ್ಸು | 36 ವರ್ಷಗಳು |
| ಉದ್ಯೋಗ | ಗೃಹಿಣಿ |
| ವಾಸ್ತವ್ಯ | ಸರಳಗಿ, ಹೊನ್ನಾವರ ತಾಲೂಕ |

**ಸಾಕ್ಷಿಯನ್ನು ದಿನಾಂಕಃ 11-07-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿದ್ದೇನೆ.

ನನಗೆ 5 ಜನ ಮಕ್ಕಳು. ಅವರೆಂದರೆ ಅಪ್ಸಿಹಾ, ಹುರೇನ್, ಫಾತಿಮಾ, ರಜಾಕ್ ಮತ್ತು ರೆಹಮಾನ್ ಹಾಗೂ 3 ವರ್ಷದ ಮಗು. ನನ್ನ ಗಂಡ ದುಬೈದಲ್ಲಿ ಇದ್ದಾರೆ.

ನಾನು ದಿನಾಂಕ 28-12-2024 ರಂದು ನಾನು ಸರಳಗಿಯಿಂದ ಉಪ್ಪೋಣಿಗೆ ನನ್ನ 3 ವರ್ಷದ ಮಗುವಿನೊಂದಿಗೆ ಹೋಗಿ ಪುನಃ ಒಂದು ಆಟೋದಲ್ಲಿ ವಾಪಸ್ಸು ಮನೆಗೆ ಬರುತ್ತಿದ್ದೆ. ರಿಕ್ಷಾ ಚಾಲಕ ರಿಕ್ಷಾವನ್ನು ವೇಗವಾಗಿ ಚಲಾಯಿಸಿಕೊಂಡು ಬರುತ್ತಿದ್ದರು. ಆಟೋ ತೂಗುಸೇತುವೆ ಹತ್ತಿರ ಬರುತ್ತಿದ್ದಾಗ ರಸ್ತೆಯಲ್ಲಿ ಒಂದು ಮಗು ಅಡ್ಡ ಬಂತು. ತಕ್ಷಣ ಆರೋಪಿ ಆಟೋಗೆ ಬ್ರೇಕ್ ಹಾಕಿದನು. ಬ್ರೇಕ್ ಹಾಕಿದ್ದರಿಂದ ಆಟೋ ಪಲ್ಟಿಯಾಯಿತು. ರಿಕ್ಷಾ ಪಲ್ಟಿಯಾದ್ದರಿಂದ ನಾನು ಆಚೆ ಬಿದ್ದೆ. ಮಗು ಆಟೋದೊಳಗೆ ಇದ್ದು ಆಟೋ ಪಲ್ಟಿಯಾಗಿದ್ದರಿಂದ ಆತನ ಕಿವಿ ಮತ್ತು ಬಾಯಿಯಿಂದ ರಕ್ತ ಬರುತ್ತಿತ್ತು. ಆಗ ಸಮಯ 12-00 ರಿಂದ 12-30 ಆಗಿತ್ತು. ನಂತರ ಅಂಬುಲನ್ಸ ಮೂಲಕ ಮಗುವನ್ನು ಸೆಂಟ್ ಇಗ್ನೇಶಿಯಸ್ ಆಸ್ಪತ್ರೆಗೆ ಕರೆದುಕೊಂಡು ಬಂದೆವು. ಪರೀಕ್ಷಿಸಿದ ವೈದ್ಯರು ಮಗು ಈಗಾಗಲೇ ಮೃತಪಟ್ಟಿದೆ ಎಂದು ಹೇಳಿದರು.

(ಮುಂದುವರಿದ ಮುಖ್ಯ ವಿಚಾರಣೆಗೆ ಎಪಿಪಿಯವರು ಸಮಯಕೋರಿದ್ದರಿಂದ ಮುಂದೂಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**